**National**
**Kannada**
**05.09.2025 / 19.35 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ರಾಷ್ಟ್ರೀಯ ಶಿಕ್ಷಕ ೨೦೨೫ ಪ್ರಶಸ್ತಿ ಪ್ರಧಾನ

೨. ನೂತನ ಜಿಎಸ್‌ಟಿಯಿಂದ ನಾಗರಿಕರ ಬಳಕೆ ಸಾಮರ್ಥ್ಯ ಸುಧಾರಿಸಲಿದೆ - ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್

೩. ತಮಿಳುನಾಡಿನ ಟುಟಿಕೋರಿನ್ ನಲ್ಲಿ ಹಸಿರು ಹೈಡ್ರೋಜನ್ ಪೈಲೆಟ್ ಸ್ಥಾವರ ಯೋಜನೆಗೆ ಕೇಂದ್ರ ಸಚಿವ ಸರ್ಬಾನಂದ ಸೋನಾವಾಲ್ ಚಾಲನೆ

೪. ಯುಎಸ್ ಓಪನ್ ಟೆನಿಸ್- ಮಹಿಳಾ ಸಿಂಗಲ್ಸ್‌ನಲ್ಲಿ, ಅಮೆರಿಕಾದ ಅಮಂಡಾ ಅನಿಸಿಮೋವಾ ಫೈನಲ್ ಪ್ರವೇಶ

><><><><><

ಶಿಕ್ಷಕರ ದಿನಾಚರಣೆ ಹಿನ್ನೆಲೆ ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ರಾಷ್ಟ್ರೀಯ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಸ್ಮಾರ್ಟ್ ಬ್ಲಾಕ್‌ಬೋರ್ಡ್‌ಗಳು, ಸ್ಮಾರ್ಟ್ ತರಗತಿ ಕೊಠಡಿಗಳು ಮತ್ತು ಇತರ ಆಧುನಿಕ ಸೌಲಭ್ಯಗಳು ತಮ್ಮದೇ ಆದ ಪ್ರಾಮುಖ್ಯತೆಯನ್ನು ಹೊಂದಿವೆ. ಆದರೆ ಅತ್ಯಂತ ಮುಖ್ಯವಾದ ವಿಷಯವೆಂದರೆ ಅದು ಬುದ್ಧಿವಂತ ಶಿಕ್ಷಕರು. ತಮ್ಮ ವಿದ್ಯಾರ್ಥಿಗಳ ಅಭಿವೃದ್ಧಿಯ ಅಗತ್ಯತೆಗಳನ್ನು ಅರ್ಥಮಾಡಿಕೊಳ್ಳುವ ಶಿಕ್ಷಕರು ಬುದ್ಧಿವಂತ ಶಿಕ್ಷಕರಾಗುತ್ತಾರೆ ಎಂದು ಅವರು ಹೇಳಿದರು.

><><><><><

೨೦೨೫ನೇ ಸಾಲಿನ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಗೆ ಆಯ್ಕೆಯಾಗಿದ್ದಾರೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆ ವಿಭಾಗದಲ್ಲಿ ರಾಜ್ಯದ ಮೂವರು ಶಿಕ್ಷಕರು ಈ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಮೈಸೂರು ಜಿಲ್ಲೆ ಹಿನಕಲ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಮಧುಸೂದನ್ ಕೆ.ಎಸ್. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವಿಭಾಗದಲ್ಲಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕೃತಕ ಬುದ್ಧಿಮತ್ತೆ (ಎಐ) ಮತ್ತು ತಂತ್ರಜ್ಞಾನದ ಬಳಕೆಯಲ್ಲಿನ ಸಾಧನೆಯನ್ನು ಪ್ರಮುಖವಾಗಿ ಗುರುತಿಸಿ ಇವರಿಗೆ ಪ್ರಶಸ್ತಿ ಲಭಿಸಿದೆ. ಕಲಬುರಗಿಯ

ಶರಣಬಸವ ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕಿಯಾಗಿರುವ ಡಾ. ಶ್ರೀದೇವಿ ದೇವೇಂದ್ರಪ್ಪ ಕಲ್ಯಾಣ್ ಉನ್ನತ ಶಿಕ್ಷಣ ಇಲಾಖೆ ವಿಭಾಗದಲ್ಲಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಅನ್ವಯಿಕ ಗಣಿತಶಾಸ್ತ್ರದಲ್ಲಿ ಪಿ ಎಚ್ ಡಿ ಪದವಿ ಪಡೆದಿರುವ ಇವರು, ಫ್ಲೂಯಿಡ್ ಡೈನಾಮಿಕ್ಸ್, ಮಿಕ್ಸೆಡ್ ಕನ್ವೆಕ್ಷನ್, ಮೈಕ್ರೋಪೋಲಾರ್, ನ್ಯಾನೊಫ್ಲೂಯಿಡ್ ಮತ್ತು ಮ್ಯಾಗ್ನೆಟೋ ಹೈಡ್ರೋಡೈನಾಮಿಕ್ ವಿಷಯಗಳಲ್ಲಿ ಸಂಶೋಧನಾ ಪರಿಣತಿ ಹೊಂದಿದ್ದಾರೆ. ಪ್ರತಿಷ್ಠಿತ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಇವರ ಪ್ರಬಂಧಗಳು ಪ್ರಕಟವಾಗಿವೆ. ಉಡುಪಿ ಜಿಲ್ಲೆ ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಗಣಿತಶಾಸ್ತ್ರದ ಅಸೋಸಿಯೇಟ್ ಪ್ರೊಫೆಸರ್ ಆಗಿರುವ ಡಾ. ಶೋಭಾ ಎಂ.ಇ. ಅವರು ಉನ್ನತ ಶಿಕ್ಷಣ ಇಲಾಖೆ ವಿಭಾಗದಲ್ಲಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅವರ ಬೋಧನಾ ವಿಧಾನವು ಪರಿಕಲ್ಪನಾತ್ಮಕ ಕಠಿಣತೆಯನ್ನು, ನೈಜ-ಪ್ರಪಂಚದ ಅನ್ವಯಿಕೆಗಳೊಂದಿಗೆ ಸಂಯೋಜಿಸುತ್ತದೆ. ಇದು ವಿದ್ಯಾರ್ಥಿಗಳು ಮೌಖಿಕ ಕಲಿಕೆಯನ್ನು ಮೀರಿ ಸಾಗಲು ಮತ್ತು ವಿಮರ್ಶಾತ್ಮಕ ಚಿಂತನೆ ಮತ್ತು ಸಮಸ್ಯೆ-ಪರಿಹರಿಸುವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಅನುವು ಮಾಡಿಕೊಡುತ್ತದೆ.

><><><><><

ಹೊಸ ಜಿಎಸ್‌ಟಿ ಆಡಳಿತವು ನಾಗರಿಕರ ಬಳಕೆ ಸಾಮರ್ಥ್ಯವನ್ನು ಸುಧಾರಿಸುತ್ತದೆ ಮತ್ತು ಬಂಡವಾಳ ವೆಚ್ಚದ ಮೇಲೆ ಹೆಚ್ಚು ಪರಿಣಾಮ ಬೀರುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಖಾಸಗಿ ಸುದ್ದಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಶೇಕಡ ೯೯ ರಷ್ಟು ಸರಕು ಮತ್ತು ಸೇವೆಗಳು ಈಗ ಶೂನ್ಯ, ಶೇಕಡ ೫ ಅಥವಾ ಶೇಕಡ ೧೮ ರಷ್ಟು ವ್ಯಾಪ್ತಿಯಲ್ಲಿವೆ. ಪರಿಹಾರ ಸೆಸ್ ಮತ್ತು ಜಿಎಸ್‌ಟಿ ಕುರಿತು ಸಮಗ್ರ ಪ್ರಸ್ತಾವನೆ ಎರಡನ್ನೂ ಕೇಂದ್ರವು ಕೈಗೆತ್ತಿಕೊಂಡಿರುವುದು ಇದೇ ಮೊದಲು ಎಂದು ಅವರು ಹೇಳಿದರು. ಪೆಟ್ರೋಲಿಯಂ ಮತ್ತು ಮದ್ಯ ಉತ್ಪನ್ನಗಳು ಜಿಎಸ್‌ಟಿಯಿಂದ ಹೊರಗಿರುತ್ತವೆ ಎಂದು ಸಚಿವರು ಮಾಹಿತಿ ನೀಡಿದರು. ಶೇಕಡ ೫೦ ರಷ್ಟು ಅಮೆರಿಕದ ಸುಂಕಗಳಿಂದ ಪ್ರಭಾವಿತರಾದ ರಫ್ತುದಾರರನ್ನು ಬೆಂಬಲಿಸಲು, ಹಲವು ಕ್ರಮಗಳ ಮೇಲೆ ಸರ್ಕಾರ ಕೆಲಸ ಮಾಡುತ್ತಿದೆ. ರಫ್ತುದಾರರಿಗೆ ಪ್ಯಾಕೇಜ್ ಸಿದ್ಧಪಡಿಸಲಾಗುತ್ತಿದೆ. ಆತ್ಮನಿರ್ಭರ ಭಾರತದ ಉದ್ದೇಶವು ದೇಶದಲ್ಲಿ ಎಲ್ಲವನ್ನೂ ಉತ್ಪಾದಿಸುವುದು ಮಾತ್ರವಲ್ಲ, ಅನಿಶ್ಚಿತ ಜಾಗತಿಕ ವ್ಯಾಪಾರ ನೀತಿಗಳ ಹಿನ್ನೆಲೆಯಲ್ಲಿ ಸ್ವಾಭಿಮಾನದ ಬಗ್ಗೆಯೂ ಗಮನ ಹರಿಸಲಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

><><><><><

ತಮಿಳುನಾಡಿನ ಟುಟಿಕೋರಿನ್‌ನಲ್ಲಿರುವ ವಿ.ಒ. ಚಿದಂಬರನಾರ್ ಬಂದರಿನಲ್ಲಿ ಹಸಿರು ಹೈಡ್ರೋಜನ್ ಪೈಲಟ್ ಸ್ಥಾವರ ಮತ್ತು ಹಲವಾರು ಇತರ ಅಭಿವೃದ್ಧಿ ಯೋಜನೆಗಳನ್ನು, ಕೇಂದ್ರ ಬಂದರುಗಳು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವ ಸರ್ಬಾನಂದ ಸೋನಾವಾಲ್ ಅವರು ಇಂದು ಉದ್ಘಾಟಿಸಿದರು. ೭.೪ ಹೆಕ್ಟೇರ್‌ಗಳಲ್ಲಿ ಹರಡಿರುವ ಹತ್ತನೇ ಕಂಟೇನರ್ ಟರ್ಮಿನಲ್, ೧೧೦ ಕಿಲೋವೋಲ್ಟ್ ಸಬ್‌ಸ್ಟೇಷನ್ ಮತ್ತು ೫೯ ಕೋಟಿ ರೂಪಾಯಿಗಳ ೬ ಮೆಗಾವ್ಯಾಟ್ ಪವನ ಶಕ್ತಿ ಯೋಜನೆ ಸೇರಿದಂತೆ ಹಲವು ಯೋಜನೆಗಳಿಗೆ ಅವರು ಅಡಿಪಾಯ ಹಾಕಿದರು. ಟುಟಿಕೋರಿನ್ ಬಂದರು ಆವರಣದಲ್ಲಿ ಸಸಿಗಳನ್ನು  ನೆಟ್ಟರು. ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಸಚಿವ, ಬಂದರು ನೇತೃತ್ವದ ಅಭಿವೃದ್ಧಿ ಉಪಕ್ರಮಗಳ ಮೂಲಕ ಹಡಗು ಉದ್ಯಮವು ಭಾರಿ ಬೆಳವಣಿಗೆಯನ್ನು ಕಾಣುತ್ತಿದೆ ಎಂದರು. ತಮಿಳುನಾಡಿನ ಜನರು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಿಂದ ಪ್ರಯೋಜನ ಪಡೆದಿದ್ದಾರೆ ಎಂದರು. ಕೇಂದ್ರ ಮತ್ತು ರಾಜ್ಯ ಎರಡೂ, ಜನರ ಕಲ್ಯಾಣಕ್ಕಾಗಿ ಕೈಜೋಡಿಸುತ್ತವೆ, ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ವಾಸಿಸುವ ಸಮುದಾಯಗಳನ್ನು ಬೆಂಬಲಿಸಲು ಜಾರಿಗೆ ತರಲಾದ ಕರಾವಳಿ ಸಮುದಾಯ ಅಭಿವೃದ್ಧಿ ಯೋಜನೆ ಕುರಿತು ಅವರು ಮಾಹಿತಿ ನೀಡಿದರು.

><><><><><

ಪ್ರಧಾನ ಮಂತ್ರಿ ಆವಾಸ್ ಯೋಜನೆ ನಗರ - ಪಿ.ಎಂ.ಎ.ವೈ-ಯು ೨.೦ ಅಡಿಯಲ್ಲಿ ಅಂಗಿಕಾರ್-೨೦೨೫ ಅಭಿಯಾನಕ್ಕೆ  ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಚಾಲನೆ ನೀಡಿದ್ದಾರೆ. ಈ ಅಭಿಯಾನವು ಒಂದು ಜನ ಸಂಪರ್ಕ ಕಾರ್ಯಕ್ರಮವಾಗಿದ್ದು, ದೇಶಾದ್ಯಂತ ಯೋಜನೆಯ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸುವ ಮೂಲಕ ಪ್ರಧಾನ ಮಂತ್ರಿ ಆವಾಸ್ ಯೋಜನೆ - ನಗರ ಯೋಜನೆಯ ಅನುಷ್ಠಾನವನ್ನು ವೇಗಗೊಳಿಸುತ್ತದೆ. ಇದು ಯೋಜನೆಯಡಿ ಅರ್ಜಿಗಳ ಪರಿಶೀಲನೆಯನ್ನು ತ್ವರಿತಗೊಳಿಸುತ್ತದೆ ಮತ್ತು ಈಗಾಗಲೇ ಮಂಜೂರಾದ ಮನೆಗಳ ಪೂರ್ಣಗೊಳಿಸುವಿಕೆಯನ್ನು ತ್ವರಿತಗೊಳಿಸುತ್ತದೆ. ಪಿ.ಎಂ.ಎ.ವೈ-ಯು ಅಡಿಯಲ್ಲಿ, ಒಂದು ಕೋಟಿ ೨೦ ಲಕ್ಷ ಮನೆಗಳನ್ನು ಮಂಜೂರು ಮಾಡಲಾಗಿದೆ, ಅವುಗಳಲ್ಲಿ ೯೪ ಲಕ್ಷಕ್ಕೂ ಹೆಚ್ಚು ಪಕ್ಕಾ ಮನೆಗಳು ಈಗಾಗಲೇ ಪೂರ್ಣಗೊಂಡಿದ್ದು ಫಲಾನುಭವಿಗಳಿಗೆ ನೀಡಲಾಗಿದೆ. ಅಂಗಿಕಾರ್ ಅಭಿಯಾನವು ಉಳಿದ ಮನೆಗಳನ್ನು ಪೂರ್ಣಗೊಳಿಸಲು ಅನುಕೂಲವಾಗಲಿದೆ ಎಂದು ಸಚಿವಾಲಯ ತಿಳಿಸಿದೆ.

><><><><><

ಜನರು ಹೆಚ್ಚಾಗಿ ಸ್ವದೇಶಿ ವಸ್ತುಗಳನ್ನು ಖರೀದಿಸುವಂತೆ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಡಾ.ವೀರೇಂದ್ರ ಕುಮಾರ್ ಕರೆ ನೀಡಿದ್ದಾರೆ. ದಿವ್ಯಾಂಗರು ಹಾಗೂ ದೀನದಲಿತರ ಸಬಲೀಕರಣಕ್ಕೆ ಈ ಮೇಳ ಸಹಕಾರಿಯಾಗಿದ್ದು ಇನ್ಮುಂದೆ ಟುಲಿಪ್ ಬ್ರ್ಯಾಂಡ್ ನ ವಸ್ತುಗಳನ್ನು ಆಯ್ಕೆ ಮಾಡುವಂತೆ ತಿಳಿಸಿದ್ದಾರೆ.

ಧ್ವನಿ : ಡಾ.ವೀರೇಂದ್ರ ಕುಮಾರ್ ( ೨೮ ಸೆಕೆಂಡುಗಳು)

ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಬೆಂಗಳೂರಿನಲ್ಲಿ ಆಯೋಜಿಸಿರುವ "ಶಿಲ್ಪ ಸಮಾಗಮ ಮೇಳಕ್ಕೆ ಸಚಿವರಾದ ಡಾ. ವೀರೇಂದ್ರ ಕುಮಾರ್ ಹಾಗೂ ರಾಜ್ಯ ಖಾತೆ ಸಚಿವ ರಾಮದಾಸ್ ಅಠಾವಳೆ ಚಾಲನೆ ನೀಡಿದರು. ಇದೇ ವೇಳೆ ಮಾತನಾಡಿದ ಸಚಿವ ರಾಮದಾಸ್ ಅಠಾವಳೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಶಿಲ್ಪ ಸಮಾಗಮ ಮೇಳಕ್ಕೆ ಆಗಮಿಸಿ ವಿವಿಧ ರಾಜ್ಯಗಳ ಕರಕುಶಲ ವಸ್ತುಗಳನ್ನು ಖರೀದಿಸುವಂತೆ ಮನವಿ ಮಾಡಿದ್ದಾರೆ. 'ವೋಕಲ್ ಫಾರ್ ಲೋಕಲ್' ಸಂಕಲ್ಪದ ಸಾಕಾರ ರೂಪವಾಗಿ ಈ ಮೇಳ ಆಯೋಜನೆಗೊಂಡಿದೆ.

><><><><><

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಹಿರಿಯ ಅಧಿಕಾರಿಗಳಿಗೆ ಅತ್ಯುತ್ತಮ ಇಂಧನ ಬಳಕೆಗಾಗಿ ಹೊಸ ಭೂಶಾಖದ ನೀತಿಯನ್ನು ರೂಪಿಸುವಂತೆ ನಿರ್ದೇಶನ ನೀಡಿದ್ದಾರೆ. ಭಾರತದಲ್ಲಿ ಭೂಶಾಖದ ಶಕ್ತಿಯ ಸಾಮರ್ಥ್ಯವನ್ನು ಚರ್ಚಿಸಲು ನವದೆಹಲಿಯಲ್ಲಿ ಇಂದು ನಡೆದ ಸಭೆಯಲ್ಲಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಜೋಶಿ ಅವರು ಹೊಸ ನೀತಿಯು ಭೂಶಾಖದ ಶಕ್ತಿಯನ್ನು ಅತ್ಯುತ್ತಮವಾಗಿ ಬಳಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ ಮತ್ತು ಭಾರತದ ನವೀಕರಿಸಬಹುದಾದ ಇಂಧನ ಮಿಶ್ರಣದ ಕಾರ್ಯಸಾಧ್ಯವಾದ, ಉದ್ಯಮ ಸ್ನೇಹಿ ಅಂಶವಾಗುತ್ತದೆ ಎಂದು ಹೇಳಿದರು.

><><><><><

ದೇಶಾದ್ಯಂತ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳಲ್ಲಿ ತೊಡಗಿರುವವರ ಮನೋಭಾವವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಶ್ಲಾಘಿಸಿದ್ದಾರೆ. ಈ ವರ್ಷ ಮಳೆಗಾಲದಲ್ಲಿ ಸಂಭವಿಸಿದ ನೈಸರ್ಗಿಕ ವಿಕೋಪಗಳ ಬಗ್ಗೆ ತಿಳಿದಾಗಲೆಲ್ಲ ತೀವ್ರ ನೋವಾಗುತ್ತದೆ ಎಂದು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು ತಿಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ, ಮೇಘಸ್ಫೋಟ, ಪ್ರವಾಹಗಳಂತಹ ಪ್ರಕೃತಿ ವಿಕೋಪಗಳಿಂದ ಭಾರೀ ನಷ್ಟ ಉಂಟಾಗಿದ್ದು, ಉತ್ತರಾಖಂಡ, ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ, ಪಂಜಾಬ್, ಅಸ್ಸಾಂ ಸೇರಿದಂತೆ ದೇಶದ ಹಲವು ಭಾಗಗಳಲ್ಲಿ ಹೆಚ್ಚಿನ ಸಾವು ನೋವುಗಳು ಸಂಭವಿಸಿವೆ. ಸಂಕಷ್ಟ ಪೀಡಿತ ಜನರ ದುಃಖದಲ್ಲಿ ರಾಷ್ಟ್ರವು ಭಾಗಿಯಾಗುತ್ತದೆ ಮತ್ತು ಇಂತಹ ಬಿಕ್ಕಟ್ಟಿನ ಸಮಯದಲ್ಲಿ ದೇಶವು ಅವರೊಂದಿಗೆ ನಿಲ್ಲಲಿದೆ ಎಂದು ಅವರು ಹೇಳಿದ್ದಾರೆ.

><><><><><

ಮಾರಿಷಸ್ ಪ್ರಧಾನಿ ನವೀನಚಂದ್ರ ರಾಮಗೂಲಮ್ ಇದೇ ತಿಂಗಳ ೯ ರಿಂದ ೧೬ ರವರೆಗೆ ಭಾರತಕ್ಕೆ ಭೇಟಿ ನೀಡಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. ರಾಮಗೂಲಮ್ ಅವರ ಪ್ರಸ್ತುತ ಅವಧಿಯಲ್ಲಿ ಭಾರತಕ್ಕೆ ನೀಡುತ್ತಿರುವ ಮೊದಲ ವಿದೇಶಿ ದ್ವಿಪಕ್ಷೀಯ ಭೇಟಿ ಇದಾಗಿದೆ ಎಂದು ಅವರು ಹೇಳಿದರು. ಈ ಭೇಟಿಯ ಸಮಯದಲ್ಲಿ, ದೆಹಲಿಯ ಜೊತೆಗೆ, ಮಾರಿಷಸ್ ಪ್ರಧಾನಿ ಮುಂಬೈ, ವಾರಣಾಸಿ, ಅಯೋಧ್ಯೆ ಮತ್ತು ತಿರುಪತಿಗೂ ಭೇಟಿ ನೀಡಲಿದ್ದಾರೆ ಎಂದು ಅವರು ಹೇಳಿದರು.

><><><><><

ಪಂಜಾಬ್‌ನಲ್ಲಿ ಸಂಭವಿಸಿದ ಪ್ರವಾಹದ ಕುರಿತು, ಪ್ರಧಾನಿಗೆ ನಷ್ಟದ ವಿವರವಾದ ವರದಿಯನ್ನು ಸಲ್ಲಿಸುವುದಾಗಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಇಂದು ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಬಿಕ್ಕಟ್ಟು ಅಪಾರವಾಗಿದೆ, ಆದರೆ ಕೇಂದ್ರ ಸರ್ಕಾರವು ಪಂಜಾಬ್ ಅನ್ನು ಇದರಿಂದ ಹೊರತರಲು ಯಾವುದೇ ಅವಕಾಶವನ್ನು ಬಿಡುವುದಿಲ್ಲ ಎಂದು ಅವರು ಹೇಳಿದ್ದಾರೆ. ನಿನ್ನೆ ಪ್ರವಾಹ ಪೀಡಿತ ಪಂಜಾಬ್‌ಗೆ ಒಂದು ದಿನದ ಭೇಟಿ ನೀಡಿದ್ದ ಸಚಿವ ಚೌಹಾಣ್, ಪ್ರವಾಹ ಪೀಡಿತ ಪ್ರದೇಶಗಳ ಪುನರ್ನಿರ್ಮಾಣಕ್ಕಾಗಿ ಅಲ್ಪ, ಮಧ್ಯಮ ಮತ್ತು ದೀರ್ಘಾವಧಿಯ ಯೋಜನೆಗಳ ಬಗ್ಗೆ ಅವರು ಒತ್ತಿ ಹೇಳಿದರು.

><><><><><

ಯುಎಸ್ ಓಪನ್ ಟೆನಿಸ್‌ನಲ್ಲಿ, ಅಮೆರಿಕಾದ ಅಮಂಡಾ ಅನಿಸಿಮೋವಾ, ನವೋಮಿ ಒಸಾಕಾ ಅವರನ್ನು ಸೋಲಿಸುವ ಮೂಲಕ, ಮಹಿಳಾ ಸಿಂಗಲ್ಸ್ ಫೈನಲ್‌ಗೆ ಅರ್ಹತೆ ಪಡೆದಿದ್ದಾರೆ. ಫೈನಲ್ ನಲ್ಲಿ ಅವರು, ಹಾಲಿ ಚಾಂಪಿಯನ್ ಅರಿನಾ ಸಬಲೆಂಕಾ ಅವರೊಂದಿಗೆ ಸೆಣೆಸಲಿದ್ದಾರೆ.

><><><><><